ಮೆಃ ಪ್ರಧಾನಃಪಟ್ಟುವರಿ ಜೆಎಂಎಫ್‌ಸಿ ನ್ಯಾಯಾಲಯ ಮುಧೋಳ ಇವರ ನ್ಯಾಯಾಲಯದಲ್ಲಿ

ಸಿ ಸಿ ನಂಃ 809ಃ2012

ಸರಕಾರ - - ಪಿರ್ಯಾಧಿ

ವಿರುದ್ಧ

1 ಹಣಮಂತ ಹಾಗೂ ಇತರರು. - - ಆರೋಪಿತರು.

- - - - -

ದಿನಾಂಕಃ 19-12-2013

ನಾನು ಶ್ರೀ ರಾಜೇಶ ಎಂ ಕಮತೆ.

ಬಿಕಾಂ.ಎಲ್‌ಎಲ್‌ಬಿ(ಸ್ಪೇಷಲ್)

ಪ್ರಧಾನ ಜೆಎಂಎಫ್‌ಸಿ ಮುಧೋಳ.

- - - -

ಆರೋಪಿತರಾದ 1) ಹಣಮಂತ ಶಂಕ್ರಪ್ಪ ಚೌದರಿ, ವಃ 22 ವರ್ಷ

2) ಸುಧೀರ ತಂಃಬಾಬು ಮಾಲ್ಗುಡಿ, ವಃ 19 ವರ್ಷ

3) ಅಶೋಕ ತಂಃಗಂಗಪ್ಪ ಚವ್ಹಾಣ, ವಃ 22 ವರ್ಷ

4) ಮಾರುತಿ ತಂಃರಾವಸಾಬ ಜಾಧವ, ವಃ 22 ವರ್ಷ

5) ಮುತ್ತಪ್ಪ ತಂಃಶಿವಪ್ಪ ಭಂಟನೂರ, ವಃ 22 ವರ್ಷ

ಸಾಕೀನಃ ನಂಃ1, 2, 4, ಮುಧೋಳ, ನಂಃ3 ಚಿಕ್ಕೂರ ತಾಂಡಾ. ನಂಃ5 ಭಂಟನೂರ

ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ.

- - - - - -

ಃಃ ದೋಷಾರೋಪಣೆ ಃಃ

ದಿನಾಂಕಃ 12-06-2012 ರಂದು ಮಧ್ಯಾಹ್ನ 2-00 ಗಂಟೆಗೆ ಮುಧೋಳ ಪೋ ಠಾ ವ್ಯಾಪ್ತಿಯಲ್ಲಿ ಬರುವ ಮುಧೋಳ ಶಹರದ ಹೌಸಿಂಗ್ ಕಾಲೋನಿಯಲ್ಲಿ ಇರುವ, ಇದರಲ್ಲಿ ಐದು ಜನ ಆರೋಪಿತರು ಕೂಡಿಕೊಂಡು ಪಿರ್ಯಾಧಿಯ ಮನೆಯ ಕಂಪೌಂಡ ಜಿಗಿದು ಒಳಗೆ ಹೋಗಿ ಸೈಕಲ್ ಮೋಟಾರ ಕಿಕ್ ಲಿವರ್ ಹಾಗೂ ಕಬ್ಬಿಣದ ರಾಡ ಬಳಸಿ ಹಿತ್ತಲ ಬಾಗಿಲಿನ ಒಳಗಿನ ಕೊಂಡಿಯನ್ನು ಮುರಿದು ಮನೆಯೊಳಗೆ ಹೋಗಿದ್ದು ಆ ಮೂಲಕ ಭಾದಂಸಂ ಕಲಂ-454 ರ ಮೇರಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ .

ಮೇಲೆ ಓದಿ ಹೇಳಿದ ದಿನಾಂಕ ಸ್ಥಳ ಮತ್ತು ಸಮಯದಲ್ಲಿ ಮೇಲ್ಕಾಣಿಸಿದಂತೆ ಆರೋಪಿತರಾದ ನೀವು ಎಲ್ಲರೂ ಕೂಡಿಕೊಂಡು ಪಿರ್ಯಾಧಿಯ ಮನೆಯೊಳಗೆ ಹೋಗಿದ್ದು ಅಲ್ಲದೇ ಬೆಡ್ ರೂಮ್‌ದಲ್ಲಿದ್ದ ಟ್ರೇಜರರಿಯನ್ನು ತೆರೆದು ಅದರಲ್ಲಿದ್ದ ಕಬ್ಬಿಣದ ರಾಡ್ ಮತ್ತು ಮುತ್ತಿನ ಎಳೆ ಹಾಗೂ ಮುತ್ತಿನ ಬಳೆಗಳು ಮತ್ತು ಬಿಲ್ವರ್, ಚೈನ್, ಮೂರು ಎಳೆಯ ಚಪಲಹಾರ, ಲಾಂಗ್ ಚೈನ್, ಬಂಗಾರದ ಕಿವಿಯಲ್ಲಿಯ ಓಲೆಗಳು, ಈ ಎಲ್ಲ ಮುದ್ದೆ ಮಾಲುಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು ಆ ಮೂಲಕ ಭಾದಂಸಂ ಕಲಂ-380 ರ ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ .

ಮೇಲ್ಕಾಣಿಸಿದ ದೋಷಾರೋಪಣೆಗಾಗಿ ನಿಮ್ಮ ಮೇಲೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಪ್ರಶ್ನೆ:1: ಆಪಾದನೆ ಓದಿ ಹೇಳಿದ್ದು, ತಿಳಿಯಿತೋ ಹೇಗೆ ?

ಉತ್ತರ :1) ಹೌದು
2) -//-
3) -//-
4) -//-
5) -//-

ಪ್ರಶ್ನೆ:2: ಆಪಾದನೆ ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆಯಾಗಬೇಕೋ ?

ಉತ್ತರ :1) ಇಲ್ಲ ವಿಚಾರಣೆಯಾಗಬೇಕು
2) -//-
3) -//-
4) -//-
5) -//-

ಒ.ಹೇ.ಕೇ ಸರಿ ಇದೆ.
19/11/17

ಪ್ರಧಾನಃಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಹನಮಂತ.ಶಿ.ಚೌಧರಿ
1) ಹಣಮಂತ ಶಂಕ್ರಪ್ಪ ಚೌದರಿ,

2) ಸುಧೀರ ತಂಃಬಾಬು ಮಾಲ್ಲುಗ್ಡಿ,

Aleem
3) ಅಶೋಕ ತಂಃಗಂಗಪ್ಪ ಚವ್ಹಾಣ,

ಮಾರುತಿ.ರಾ.ಜಾಧವ
4) ಮಾರುತಿ ತಂಃರಾವಸಾಬ ಜಾಧವ,

M. S. Banew
5) ಮುತ್ತಪ್ಪ ತಂಃಶಿವಪ್ಪ ಭಂಟನೂರ,